

# ಕಥೋಪದೇಶ

## ಪ್ರಾಮಾಣಿಕತೆಗೆ ದೊರೆತ ಬೆಲೆ

**ಹಿಂದೆ** ನಭಗನೆಂಬ ಒಬ್ಬ ಋಷಿ ಇದ್ದನು. ಅವನಿಗೆ ಅನೇಕ ಮಕ್ಕಳಿದ್ದರು. ಅವರಲ್ಲಿ ನಾಭಾಗನೂ ಒಬ್ಬ. ಅವನು ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ. ಆ ಸಮಯದಲ್ಲಿ ಅವನ ಹಿರಿಯರು ಅಪ್ಪನ ಎಲ್ಲ ಆಸ್ತಿಯನ್ನೂ ವಿಭಾಗ ಮಾಡಿಕೊಂಡರು. ಇವನು ಗುರುಕುಲದಿಂದ ಹಿಂತಿರುಗಿ ಮನೆಗೆ ಬಂದಾಗ ವಯಸ್ಸಾದ ಅಪ್ಪನನ್ನು ಅವನ ಪಾಲಿಗೆ ಬಿಟ್ಟರು. ನಾಭಾಗನು ಸಂತೋಷದಿಂದ ಭಕ್ತಿಯಿಂದ ಅಪ್ಪನ ಸೇವೆ ಮಾಡುತ್ತಿದ್ದ. ಹೀಗೆ ಕಾಲ ಕಳೆಯುತ್ತಿರುವಾಗ, ಅಪ್ಪ ಮಗನ ಸೇವೆಯಿಂದ ತುಂಬಾ ತೃಪ್ತನಾಗಿ ಇವನಿಗೆ ಒಳ್ಳೆಯದನ್ನು ಮಾಡುವುದಕ್ಕೆ ಕಾಲ ಕಾಯುತ್ತಿದ್ದ.

ಕೆಲವು ಋಷಿಗಳು ಸ್ವರ್ಗಲೋಕವನ್ನು ಕೊಡುವ ಒಂದು ದೀರ್ಘಕಾಲದ ಯಾಗವನ್ನು ಆರಂಭಿಸಿದ್ದರು. ಅವರಿಗೆ ಆ ಯಾಗದ ಅಂತಿಮ ಘಟ್ಟವಾದ ಸ್ವರ್ಗಲೋಕವನ್ನು ಕರುಣಿಸುವ ಮಂತ್ರಗಳು ತಿಳಿದಿರಲಿಲ್ಲ. ಅಪ್ಪ ಮಗ ನಭಗನನ್ನು ಕರೆದು —"ಮಗು! ನಾನು ನಿನಗೆ ಕೆಲವು ಮಂತ್ರಗಳನ್ನು ಉಪದೇಶಿಸುತ್ತೇನೆ. ಅವನ್ನು ಪಡೆದುಕೊಂಡು ನೀನು ಋಷಿಗಳು ಯಾಗ ಮಾಡುತ್ತಿರುವ ಜಾಗಕ್ಕೆ ಹೋಗಿ ಅವರ ಯಾಗವನ್ನು ಪೂರ್ಣಗೊಳಿಸು. ಅವರು ಕೊಟ್ಟುದನ್ನು ಪಡೆದುಕೋ"— ಎಂದು ಹೇಳಿ, ಮಂತ್ರವನ್ನು ಉಪದೇಶಿಸಿದನು. ನಾಭಾಗ ಅಪ್ಪನ ಮಾತಿನಂತೆ ಋಷಿಗಳು ಯಾಗ ಮಾಡುತ್ತಿದ್ದ ಸ್ಥಳಕ್ಕೆ ಬಂದ. ಕೊನೆಯ ಘಟ್ಟದ ಮಂತ್ರಗಳ ಅರಿವಿಲ್ಲದ ಆ ಋಷಿಗಳು ಬಹಳ ಚಿಂತಿತರಾಗಿದ್ದರು. ನಾಭಾಗನು "ನಿಮ್ಮ ಸಮಸ್ಯೆಗೆ ಪರಿಹಾರ ಕೊಡಬೇಕೆಂದೇ ನನ್ನನ್ನು ಇಲ್ಲಿಗೆ ಕಳುಹಿಸಿದ್ದಾರೆ" ಎಂದು ತಿಳಿಸಿದ. ಋಷಿಗಳಿಗೆ ಬಹಳ ಸಂತೋಷವಾಯಿತು. ಅವನನ್ನು ಮುಂದಿಟ್ಟುಕೊಂಡು ಯಾಗವನ್ನು ಪೂರ್ಣಗೊಳಿಸಿದರು. ಯಾಗದ ಫಲವಾಗಿ ಅವರು ಸ್ವರ್ಗಲೋಕಗಳಿಗೆ ಹೋದರು. ನಾಭಾಗನಿಗೆ ಏನನ್ನೂ ಕೊಡಲಿಲ್ಲ. ನಾಭಾಗ ಅಲ್ಲಿ ವೇದಿಕೆಯಲ್ಲಿ ಉಳಿದಿದ್ದುದೆಲ್ಲವನ್ನೂ ತೆಗೆದುಕೊಂಡು ಹೊರಡಲು ಸಿದ್ಧನಾದ. ಆಗ ಯಜ್ಞವೇದಿಕೆಯಿಂದ ರುದ್ರ ಬಂದ. "ಸ್ವಲ್ಪ ತಡೆ. ಅದು ಯಾವುದನ್ನೂ ನೀನು ತೆಗೆದುಕೊಂಡು ಹೋಗಲಾರೆ. ಅದೆಲ್ಲ ನನಗೆ ಸೇರಬೇಕಾದ್ದು"—ಎಂದು ನಾಭಾಗನನ್ನು ತಡೆದ. "ತಂದೆ ಹೇಳಿದ್ದಾರೆ, ಅದರಂತೆ ಇದೆಲ್ಲಾ ನನ್ನದು" ಎಂದು ನಾಭಾಗ ಹೇಳಿದ. ಆಗ ರುದ್ರ "ನೀನು ನಿಮ್ಮ ತಂದೆಯವರನ್ನೇ ಕೇಳಿ ಬಾ" ಎಂದು ಹೇಳಿ ಕಳಿಸಿದ. ನಾಭಾಗ ಎಲ್ಲವನ್ನೂ ಅಲ್ಲೇ ಬಿಟ್ಟು ತಂದೆಯ ಬಳಿಗೆ ಬಂದು ಅಲ್ಲಿ ನಡೆದುದನ್ನು ತಿಳಿಸಿ, "ಯಜ್ಞದ ನಂತರ ಯಜ್ಞವೇದಿಕೆಯಲ್ಲಿ ಉಳಿದಿರುವುದು ಯಾರ ಪಾಲು?" ಎಂದು ಕೇಳಿದ. ಆಗ ಅಪ್ಪ—"ಹೌದು, ಮಗು, ರುದ್ರ ಹೇಳಿದಂತೆ ಅದೆಲ್ಲ ರುದ್ರನ ಪಾಲು. ಅದು ಅವನಿಗೇ ಸಲ್ಲಬೇಕಾದ್ದು. ನಾನು ಆ ಋಷಿಗಳು ನಿನಗೇನಾದರೂ ಕೊಡುವರೆಂದು ತಿಳಿದಿದ್ದೆ"— ಎಂದು ಹೇಳಿದರು. ನಾಭಾಗ ಸ್ವಲ್ಪವೂ ಬೇಸರ, ದುಃಖ, ಇಲ್ಲದೆ ಹಿಂತಿರುಗಿ ಬಂದು ಅಲ್ಲೇ ವೇದಿಕೆಯ ಬಳಿ ಇದ್ದ ರುದ್ರನಿಗೆ—"ನೀನು ಹೇಳಿದಂತೆ ಇವೆಲ್ಲ ನಿನ್ನದೇ ಎಂದು ನನ್ನ ತಂದೆ ಹೇಳಿರುವರು. ದಯಮಾಡಿ ಇದನ್ನು ಸ್ವೀಕರಿಸು, ನನ್ನ ತಪ್ಪನ್ನು ಮನ್ನಿಸು"—ಎಂದು ಪ್ರಾರ್ಥಿಸಿದನು. ಆಗ ರುದ್ರನು ನಾಭಾಗನ ಪ್ರಾಮಾಣಿಕತೆಗೆ ಮೆಚ್ಚಿ ಅಲ್ಲಿ ಯಜ್ಞವೇದಿಕೆಯಲ್ಲಿ ಉಳಿದುದಷ್ಟೇ ಅಲ್ಲದೆ ತನ್ನ ಕೃಪಾನುಗ್ರಹದಿಂದ ಮತ್ತೂ ಹೆಚ್ಚಿನ ಸಂಪತ್ತನ್ನು ಅನುಗ್ರಹಿಸಿದನು.

ಕಲೆ : ಸೋಮಶೇಖರ

